**ಸಾಕ್ಷಿಯನ್ನು ದಿಃ 13.09.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ.ಸಿ.ಡಿ ವಕೀಲರಿಂದಃ**

1998 ರಲ್ಲಿ ನನ್ನ ತಂದೆ ಉಯಿಲು ಮಾಡುವ ಸಮಯದಲ್ಲಿ ಆರೋಗ್ಯವಾಗಿದ್ದರು ಅಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಯಾವಾಗ ತೀರಿಕೊಂಡರು ಅಂದರೆ ನನಗೆ ನೆನಪಿಲ್ಲ. ನನ್ನ ತಂದೆ ತಾಯಿ ಬದುಕಿದ್ದಾಗ ನಾನು ದಾವಾ ಸ್ವತ್ತಿನ ಕುರಿತು ಯಾವುದೇ ಹಿಸ್ಸೆ ಕೇಳಿಲ್ಲ ಅಂದರೆ ಸರಿ. ದಿ.12.10.2017 ರಲ್ಲಿ ದಾವಾ ಸ್ವತ್ತನ್ನು ಪ್ರತಿವಾದಿಗಳು ವಿಭಾಗ ಮಾಡಿಕೊಂಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಕುರಿತು ಪ್ರತಿವಾದಿಗಳು ವಿಭಾಗ ಮಾಡಿಕೊಳ್ಳುವ ಸಮಯದಲ್ಲಿ ವಿಷಯ ತಿಳಿದಿದ್ದರೂ ಸಹ ನಾನು ಯಾವುದೇ ತಕರಾರು ಮಾಡಿಲ್ಲ ಅಂದರೆ ಸರಿಯಲ್ಲ. ನನಗೆ ವಿಭಾಗದ ವಿಷಯ ತಿಳಿದಿರಲಿಲ್ಲ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ನನ್ನ ತಂದೆ ಮರಣ ಹೊಂದುವ ಸಮಯದಲ್ಲಿ ಪ್ರತಿವಾದಿಗಳ ಜೊತೆ ವಾಸವಾಗಿದ್ದರು ಅಂದರೆ ಸರಿ . ನನ್ನ ತಂದೆ ನಿವೃತ್ತಿ ಹೊಂದಿದ ಸಮಯದಲ್ಲಿ ಪ್ರತಿವಾದಿಗಳು ನನ್ನ ತಂದೆಯ ಪಾಲನೆ ಪೋಷಣೆ ಮಾಡಿದ್ದರು ಅಂದರೆ ಸರಿಯಲ್ಲ. ನಾನು ನನ್ನ ಮದುವೆ ಆದ ನಂತರ ನನ್ನ ತಂದೆ ತಾಯಿಯಿಂದ ಪ್ರತ್ಯೇಕವಾಗಿ ವಾಸವಾಗಿದ್ದೆ ಅಂದರೆ ಸರಿ . ಮನೆ ಚಿಕ್ಕದಾದ್ದರಿಂದ ನನ್ನ ತಂದೆ ತಾಯಿ ನನ್ನನ್ನು ಪ್ರತ್ಯೇಕ ಕಳುಹಿಸಿದರು ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ನನ್ನ ತಂದೆ ತಾಯಿಯ ಮರಣದ ನಂತರ ಅವರ ಶವ ಸಂಸ್ಕಾರ ಮತ್ತು ಉತ್ತರ ಕ್ರಿಯೆಯನ್ನು ಪ್ರತಿವಾದಿ ಮಾಡಿರುತ್ತಾರೆ ಅಂದರೆ ಸರಿಯಲ್ಲ. ನನ್ನ ತಂದೆ ತಾಯಿಯನ್ನು ವೃದ್ದಾಪ್ಯ ಕಾಲದಲ್ಲಿ ಪ್ರತಿವಾದಿಗಳು ನೋಡಿಕೊಂಡಿದ್ದ ಕಾರಣ ಆ ಪ್ರೀತಿ ವಿಶ್ವಾಸದಿಂದ ನನ್ನ ತಂದೆ ತಾಯಿ ಪ್ರತಿವಾದಿಗಳಿಗೆ ಉಯಿಲು ಪತ್ರ ಬರೆದಿರುತ್ತಾರೆ ಅಂದರೆ ಸರಿಯಲ್ಲ. ಸದರಿ ದಾವಾ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಆದ್ದರಿಂದ ನನ್ನ ತಂದೆ ಯಾರಿಗೆ ಬೇಕಾದರೂ ಸ್ವತ್ತನ್ನು ಉಯಿಲು ಬರೆಯುವ ಅಧಿಕಾರವಿತ್ತು ಅದರಲ್ಲಿ ನನಗೆ ಯಾವುದೇ ಪಾಲು ಇರುವುದಿಲ್ಲ ಅಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ಪಡೆಯುವ ದುರುದ್ದೇಶದಿಂದ ಸದರಿ ದಾವೆಯನ್ನು ಹೂಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ದಾವಾ ಸ್ವತ್ತಿಗೆ ಸಂಬಂಧಿಸಿದ ಉಯಿಲಿನ ಕುರಿತು ನಾವು ಬೇರೆ ಯಾವುದೇ ದಾವೆ ಹೂಡಿರುವುದಿಲ್ಲ. ದಾವಾ ಸ್ವತ್ತಿನ ಆಸ್ತಿಯನ್ನು ಪಡೆಯಮ ಸಲುವಾಗಿ ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಮಮತ.ಪಿ.)**
**2 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**